ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ನಿವೃತ್ತಿಯಾದ ನೌಕರರನ್ನು ಪ್ರಾಧಿಕಾರದಲ್ಲಿ ಮುಂದುವರಿಸಿರುವ ಬಗ್ಗೆ

ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಚುನಾಯಿತರಾದವರು) –

55 (641) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೃತ್ತಿ ಹೊಂದಿದ ಅಧಿಕಾರಿ/ ನೌಕರರನ್ನು ಮುಂದುವರೆಸಿರುವುದು ನಿಜವೇ; ಹಾಗಿದ್ದಲ್ಲಿ ಯಾವ್ಯಾವ ದಿನಾಂಕದಂದು ನಿವೃತ್ತಿ ಹೊಂದಿದವರನ್ನು ಯಾವ ದಿನಾಂಕದಿಂದ ಮುಂದುವರೆಸಲಾಗಿದೆ; (ಮಾಹಿತಿ ನೀಡುವುದು)

(ಆ) ನಿವೃತ್ತರನ್ನು ಮುಂದುವರೆಸಿರುವುದು ಸರ್ಕಾರದ ಆದೇಶದ ವಿರುದ್ಧವಾಗಿಲ್ಲವೇ; ನಿವೃತ್ತರಿಂದಾಗುವ ಅಚಾತುರ್ಯ ಅಥವಾ ಬೇಜವಾಬ್ದಾರಿತನಗಳಿಗೆ ಹೇಗೆ ಜವಾಬ್ದಾರಿ ನಿಗದಿಗೊಳಿಸಲು ಸಾಧ್ಯ; (ಮಾಹಿತಿ ನೀಡುವುದು)

(ಇ) ಪ್ರಾಧಿಕಾರದಲ್ಲಿ ಮುಂದುವರೆದಿರುವ ನಿವೃತ್ತ ನೌಕರರನ್ನು ಕೈಬಿಡುವ ಅಥವಾ ತೆಗೆದುಹಾಕುವ ಬಗ್ಗೆ ಕಳೆದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಭರವಸೆ ನೀಡಿರುವುದು ನಿಜವೇ; (ಭರವಸೆ ದಿನಾಂಕವನ್ನು ತಿಳಿಸುವುದು) ಇದ್ದಲ್ಲಿ ಈವರೆಗೂ ಈ ದಿಸೆಯಲ್ಲಿ ಪ್ರಾಧಿಕಾರ ಕೈಗೊಂಡ ಕ್ರಮಗಳೇನು;

(ಈ) ಇಂತಹವುಗಳನ್ನು ತಪ್ಪಿಸಿ ಅನೇಕ ವರ್ಷಗಳಿಂದ ಅನುಕಂಪದ ಆಧಾರದ ಮೇಲೆ ಉದ್ಯೋಗ ಬಯಸಿ ಅರ್ಜಿ ಸಲ್ಲಿಸಿದವರನ್ನು ಪರಿಗಣಿಸಲು ಅಥವಾ ನೇಮಕಾತಿ ಪ್ರಕ್ರಿಯೆಗಳನ್ನು ಕೈಗೊಳ್ಳಲು ಇರುವ ತೊಂದರೆಗಳೇನು; ಈ ಬಗ್ಗೆ ಕೈಗೊಳ್ಳುವ ಕ್ರಮಗಳೇನು?